# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ

**ಸಿ.ಸಿ.ನಂ.640/2023**

1) ಮುಧೋಳ ಪಟ್ಟಣ ಕ್ರೇಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಮುಧೋಳ
ಶಾಖೆಃ ಮಹಾಲಿಂಗಪೂರ ಇದನ್ನು ಪ್ರತಿನಿಧಿಸುವವರು ವ್ಯವಸ್ಥಾಪಕರಾದ
ಶ್ರೀ.ಜಗದೀಶ ಮಲ್ಲಪ್ಪ ಬೆಟಗೇರಿ,
ಸಾಃ ಮಹಾಲಿಂಗಪೂರ.

.....ಫಿರ್ಯಾದಿದಾರ

– ವಿರುದ್ಧ –

1) ಶ್ರೀ.ಬಿಲಾಲ ಸಯ್ಯದಸಾಬ ಮಕಾನದಾರ,
ಸಾಃ ಮಹಾಲಿಂಗಪೂರ.

......ಆರೋಪಿ

**– ಆಪಾದನೆ –**

ನಾನು ಶ್ರೀಮತಿ ಶುಷ್ಮ ಟಿ.ಸಿ. ಬಿ.ಕಾಂ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ , ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ಆರೋಪಿಯಾದ ನೀವು ಫಿರ್ಯಾದಿದಾರ ಸೊಸೈಟಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ರೂ.95,834/-ಗಳ ಪಾವತಿಗಾಗಿ ನೀವು ನಿಮ್ಮ ಖಾತೆ ಇರುವ ಕೆನರಾ ಬ್ಯಾಂಕ್ ಶಾಖೆ ಮಹಾಲಿಂಗಪೂರ ಬ್ಯಾಂಕಿನ ಚೆಕ್ ನಂ.140823 ನ್ನು ರೂ.95,834/-ಗಳಿಗೆ 10-04-2023 ರ ದಿನಾಂಕ ನಮೂದಿಸಿ ಫಿರ್ಯಾದಿದಾರರಿಗೆ ನೀಡಿದ್ದು, ಅವರು ಅದನ್ನು ತಮ್ಮ ಬ್ಯಾಂಕಿನ ಮೂಲಕ ನಗದೀಕರಿಸಲು ಹಾಕಿದಾಗ ನಿಮ್ಮ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ "Account closed" ಎನ್ನುವ ಹಿಂಬರಹದೊಂದಿಗೆ ಸದರಿ ಚೆಕ್ ದಿನಾಂಕ 11-04-2023 ರಂದು ನಗದೀಕರಣವಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕ 18-04-2023 ರಂದು ನಿಮಗೆ ಲೀಗಲ್ ನೋಟೀಸ್ ನೀಡಿದ್ದು, ಸದರಿ ನೋಟೀಸ್ ನಿಮಗೆ ದಿನಾಂಕ 26-04-2023 ರಂದು ಜಾರಿಯಾಗಿದ್ದು, ನಂತರ 15 ದಿನ ಕಳೆದರೂ ಸಹ ನೀವು ಚೆಕ್ಕಿನಲ್ಲಿ ನಮೂದಿಸಿದ ಹಣ ಪಾವತಿಸದೇ ಲಿಖಿತ ವರ್ಗಾವಣೆಗಳ ಕಾಯ್ದೆ (N.I.Act) ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿ ಅಂತಾ ಆಪಾದಿಸಲಾಗಿದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ- ತಿಳಿಯಿತು.

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ- ಸುಳ್ಳು ವಿಚಾರಣೆಯಾಗಬೇಕು.

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

Sd/-

ಸ್ಥಳಃ ಬನಹಟ್ಟಿ
ದಿನಾಂಕ : 29-02-2024

ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ.